ನಂ.ಇಎಕ್ಸ್‌ಇ/ಇಎಸ್‌ಟಿ/ಎಪಿಟಿ/ವಾ.ಚಾ/120/2014-15,

ಜಿಲ್ಲಾಧಿಕಾರಿಗಳ ಕಛೇರಿ,
ಉತ್ತರ ಕನ್ನಡ ಜಿಲ್ಲೆ, ಕಾರವಾರ.
ದಿನಾಂಕ: 31/03/2015.

# ಅಧಿಸೂಚನೆ

**ವಿಷಯ:** ಉತ್ತರ ಕನ್ನಡ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ 11 ವಾಹನ ಚಾಲಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:**
1) ಮಾನ್ಯ ಅಬಕಾರಿ ಆಯುಕ್ತರು, ಬೆಂಗಳೂರು ರವರ ಪತ್ರ ಸಂಖ್ಯೆ. ಇಸಿಇ/ 32/ ವಾಚಾ/ನೇಮಕಾತಿ/2008, ದಿ: 17/11/2011. 12/12/2011, 04/05/2012 ಮತ್ತು 11/01/2013.
2) ಮಾನ್ಯ ಅಬಕಾರಿ ಆಯುಕ್ತರು, ಬೆಂಗಳೂರು ರವರ ಪತ್ರ ಸಂಖ್ಯೆ. ಇಸಿಇ/11/ವಾಚಾ/ ಎಪಿಟಿ/2013, ದಿನಾಂಕ: 17/11/2014
3) ಸರ್ಕಾರದ ಪತ್ರ ಸಂಖ್ಯೆ. ಆಇ/150/ಇಪಿಎಸ್/2010, ದಿ: 11/03/2011
4) ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ/31/ಎಪಿಎಸ್/99, ದಿ: 03/06/1999

----OOOOO----

ಉತ್ತರ ಕನ್ನಡ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ವಾಹನ ಚಾಲಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿಮಾಡುವ ಕುರಿತಂತೆ ಉಲ್ಲೇಖ (1) ಮತ್ತು (2) ರಲ್ಲಿ ನೀಡಿದ ಆದೇಶ / ನಿರ್ದೇಶನಗಳ ಮೇರೆಗೆ ಅರ್ಹ ಅಭ್ಯರ್ಥಿಗಳಿಂದ ಈ ಕಳಗಿನ ಶರತ್ತುಗಳಿಗೆ ಒಳಪಟ್ಟು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1) **ಹುದ್ದೆಗಳ ವಿವರ:**

ವಾಹನ ಚಾಲಕ : 11

2) **ಹುದ್ದೆಯ ವರ್ಗೀಕರಣ :**

| | ಇತರೆ | ಮಹಿಳಾ | ಗ್ರಾಮೀಣ | ಒಟ್ಟೂ |
|---|---|---|---|---|
| ಅ) ಪ.ಜಾ | 01 | 01 | -- | 02 |
| ಆ) ಪ.ಪಂ | 01 | -- | -- | 01 |
| ಇ) ಪ್ರ-1 | 01 | -- | -- | 01 |
| ಈ) ಪ್ರ-2(ಎ) | 01 | -- | -- | 01 |
| ಉ) ಪ್ರ-2(ಬಿ) | 01 | --- | -- | 01 |
| ಊ) ಪ್ರ-3(ಎ) | --- | --- | -- | -- |
| ಋ) ಪ್ರ-3(ಬಿ) | --- | --- | -- | -- |
| ಋ) ಸಾ.ಅ | 02 | 02 | 01 | 05 |
| ಒಟ್ಟೂ | 07 | 03 | 01 | 11 |

**ಸೂಚನೆ :** ಮಹಿಳಾ ಮೀಸಲಾತಿಯ ರಿಕ್ತ ಸ್ಥಾನದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆ ವರ್ಗಕ್ಕೆ ಸೇರಿದ ಅರ್ಹ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

3) **ವಿದ್ಯಾರ್ಹತೆ :**

ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ ಈ ಕೆಳಗೆ ನಮೂದಿಸಿರುವ ನಿಗದಿತ ಅರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಬೇಕು.

1) ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅಭ್ಯರ್ಥಿಯು ಕನಿಷ್ಟ 7 ನೇ ತರಗತಿ ಉತ್ತೀರ್ಣರಾಗಿರಬೇಕು.
2) 7 ನೇ ತರಗತಿಯನ್ನು ಉತ್ತೀರ್ಣರಾಗದೇ ನೇರವಾಗಿ 10 ನೇ ತರಗತಿಯನ್ನು ಉತ್ತೀರ್ಣರಾದ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
3) ಚಾಲ್ತಿಯಲ್ಲಿರುವ ಲಘು ವಾಹನ ಚಾಲನಾ ಪರವಾನಿಗೆ (LMV Driving Licence) ಪತ್ರವನ್ನು ಹೊಂದಿರಬೇಕು
4) ಪ್ರಥಮ ಚಿಕಿತ್ಸೆ ದೃಢೀಕರಣ ಪತ್ರವನ್ನು ಹೊಂದಿರಬೇಕು (First Aid Certificate)

4) **ದೇಹದಾರ್ಢ್ಯತೆ :**

| ಕ್ರ.ಸಂ | | ಪುರುಷರಿಗೆ | ಮಹಿಳೆಯವರಿಗೆ |
|---|---|---|---|
| 1) | ಎತ್ತರ | 163 ಸೆಂ.ಮೀ. | 157 ಸೆಂ. ಮೀ |
| 2) | ಎದೆಯ ಸುತ್ತಳತೆ<br>ಹಿಗ್ಗಿಸಿದಾಗ | ಕನಿಷ್ಠ – 81 ಸೆಂ.ಮೀ.<br>5 ಸೆಂ.ಮೀ. | ತೂಕ- 49.9 ಕೆ.ಜಿ |
| 3) | ದೃಷ್ಟಿ ಸಾಮರ್ಥ್ಯ | 6/9 ಅಥವಾ 6/12 | 6/9 ಅಥವಾ 6/12 |

ವಿ.ಸೂ : ಪ್ರತಿಯೊಂದು ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ (Colour Blindness), ಮೆಳ್ಳೆಗಣ್ಣು (Squint Eye), ಅಥವಾ ಯಾವುದೇ ಕಣ್ಣಿ / ರಪ್ಪೆಯ ವಿಕೃತ ಸ್ಥಿತಿಯನ್ನು (Morbid Conditions), ಅನರ್ಹತೆ ಎಂದು ಪರಿಗಣಿಸಲಾಗುವುದು.

5) **ವಯೋಮಿತಿ :** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದಂದು ಈ ಕೆಳಗಿನಂತೆ ವಯೋಮಿತಿ ಹೊಂದಿರತಕ್ಕದ್ದು.

| | | |
|---|---|---|
| (1) ಸಾಮಾನ್ಯ ವರ್ಗ | : | ಕನಿಷ್ಟ 18, ಗರಿಷ್ಟ 35 ವರ್ಷ |
| (2) ಇತರೆ ಹಿಂದುಳಿದ ವರ್ಗ | : | ಕನಿಷ್ಟ 18, ಗರಿಷ್ಟ 38 ವರ್ಷ |
| (3) ಪ.ಜಾ / ಪ.ಪಂ / ಪ್ರವರ್ಗ–1 | : | ಕನಿಷ್ಟ 18, ಗರಿಷ್ಟ 40 ವರ್ಷ |

6) **ಜಾತಿ :** ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿ ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

7) **ಅರ್ಜಿಯನ್ನು ಸಲ್ಲಿಸಲು ವಿಧಾನ ಮತ್ತು ಕೊನೆಯ ದಿನಾಂಕ :-**

a) ಅರ್ಜಿಯ ನಮೂನೆಯನ್ನು ವೆಬ್‌ಸೈಟ್ uttarakannada.nic.in ನಲ್ಲಿ ಪ್ರಕಟಿಸಲಾಗಿದೆ. ಅರ್ಜಿ ನಮೂನೆಯನ್ನು ಸದರಿ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ನಿಗದಿತ ನಮೂನೆಯಲ್ಲಿ ಮಾಹಿತಿಗಳನ್ನು ಭರ್ತಿ ಮಾಡಿ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಅಬಕಾರಿ ಭವನ, ಡಿಸ್ಟಿಲರಿ ಕಂಪೌಂಡ್, ಕೊಡಿಬಾಗ, ಕಾರವಾರ–581 303, ಉತ್ತರ ಕನ್ನಡ ಜಿಲ್ಲೆ ಇಲ್ಲಿ ಸಲ್ಲಿಸತಕ್ಕದ್ದು.

b) ಅರ್ಜಿ ಶುಲ್ಕ ರೂ. 5/- ರ ಕ್ರಾಸ್ಡ್ ಇಂಡಿಯನ್ ಪೋಸ್ಟಲ್ ಆರ್ಡರನ್ನು ವಾಹನ ಚಾಲಕ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರ ಹೆಸರಿನಲ್ಲಿ ಪಡೆಯತಕ್ಕದ್ದು (ಪರಿಶಿಷ್ಟ ಜಾತಿ / ಪಂಗಡ ಮತ್ತು ಪ್ರವರ್ಗ–1 ರ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ)

c) ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ : 08/05/2015** ಆಗಿರುತ್ತದೆ. ತದನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

d) ಅಭ್ಯರ್ಥಿಗಳು ಸದರಿ ಅಧಿಸೂಚನೆ ಅಡಿಯಲ್ಲಿ ಪ್ರಕಟಿಸಲಾದ ಹುದ್ದೆಗೆ ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣಕ್ಕಾಗಿ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಒಂದಕ್ಕಿಂತ ಹೆಚ್ಚು ಅರ್ಜಿ ಬಂದಲ್ಲಿ ಒಂದನ್ನು ಮಾತ್ರ ಪರಿಗಣಿಸಲಾಗುವುದು.

8) **ಆಯ್ಕೆ ವಿಧಾನ :**

1) ಅಭ್ಯರ್ಥಿಗಳ ಆಯ್ಕೆಯನ್ನು ಕರ್ನಾಟಕ ಅಬಕಾರಿ ಸಾಮಾನ್ಯ ಸೇವೆಗಳು, ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ರಂತೆ

2) ಸಮರ್ಪಕವಾಗಿ ದಾಖಲಾತಿಗಳನ್ನು ಸಲ್ಲಿಸಿದ ಅಭ್ಯರ್ಥಿಗಳ ವೈದ್ಯಕೀಯ ಮತ್ತು ದೇಹದಾರ್ಢ್ಯತೆಯ (Physical Standard / Fitness) ಪರೀಕ್ಷೆಯನ್ನು ನಡೆಸಲಾಗುವುದು.

3) 1 : 3 ರಂತೆ ಅರ್ಹ ಅಭ್ಯರ್ಥಿಗಳನ್ನು ವಾಹನ ಚಾಲನಾ ವೃತ್ತಿ ಪರೀಕ್ಷೆಗೆ ಕರೆಯಲಾಗುವುದು.

4) ಎಲ್ಲಾ ಹಂತಗಳಲ್ಲಿ ಯಶಸ್ವಿಯಾಗಿರುವ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಲಾಗುವುದು. ಈ ಪ್ರಕ್ರಿಯೆಯಲ್ಲಿ 7 ನೇ ತರಗತಿಯಲ್ಲಿ ಪಡೆದ ಅಂಕಗಳನ್ನು ಮಾನದಂಡವಾಗಿ ಪರಿಗಣಿಸಲಾಗುವುದು.

5) ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಮಾತ್ರ ಪೋಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆಗೆ ನಿಯೋಜಿಸಲಾಗುವುದು.

6) ಸದರಿ ಶಾಲೆಯಿಂದ ' ತೃಪ್ತಿಕರ ' ಎಂದು ಪ್ರಮಾಣ ಪತ್ರ ಪಡೆದ ಅಭ್ಯರ್ಥಿಗಳ ಪೈಕಿ 7 ನೇ ತರಗತಿಯಲ್ಲಿ ಗರಿಷ್ಟ ಅಂಕಗಳನ್ನು ಪಡೆದ ಅರ್ಹ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

ಈ ಪ್ರಕ್ರಿಯೆಯ ನಂತರವೂ ಅರ್ಹ ಅಭ್ಯರ್ಥಿಗಳ ಕೊರತೆ ಇದ್ದಲ್ಲಿ ಮುಂದಿನ ಅಭ್ಯರ್ಥಿಗಳನ್ನೊಳಗೊಂಡ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬಿಡುಗಡೆಮಾಡಿ ಮೇಲಿನಂತೆ ಪ್ರಕ್ರಿಯೆ ಮುಂದುವರೆಸಲಾಗುವುದು.

**9) ಹುದ್ದೆಯ ವೇತನ ಶ್ರೇಣಿ :**

ವಾಹನ ಚಾಲಕ : 11,600-200-12,000-250-13,000-300-14,200-350-15,600-400-17,200-450-19,000-500-21,000

1) ಆಯ್ಕೆಗೊಂಡು ನೇಮಕಾತಿ ಹೊಂದಿದ ಅಭ್ಯರ್ಥಿಗಳನ್ನು ಎರಡು ವರ್ಷಗಳ ಅವಧಿಯವರೆಗೆ ಪರೀಕ್ಷಾರ್ಥ ಅವಧಿಯಲ್ಲಿಡಲಾಗುವುದು.

2) ದಾಖಲಾತಿಗಳ ಪರಿಶೀಲನೆ, ದೇಹದಾರ್ಢ್ಯತೆ ಪರೀಕ್ಷೆ / ಪೋಲೀಸ್ ಚಾಲನಾ ಮತ್ತು ನಿರ್ವಹಣೆ ವೃತ್ತಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ತರಹದ ಗೌರವಧನ ನೀಡಲಾಗುವುದಿಲ್ಲ ಹಾಗೂ ಇದಕ್ಕೆ ಯಾವುದಾದರೂ ನಿಗದಿತ ಶುಲ್ಕವಿದ್ದಲ್ಲಿ ಅಭ್ಯರ್ಥಿಗಳು ಸ್ವತಃ ಭರಿಸತಕ್ಕದ್ದು.

10) ಅಭ್ಯರ್ಥಿಗಳು ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳ ಪ್ರತಿಗಳನ್ನು **ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ** ಸಲ್ಲಿಸತಕ್ಕದ್ದು.

1) 7 ನೇ ತರಗತಿ ವಿದ್ಯಾರ್ಹತೆಯ ಪ್ರಮಾಣ ಪತ್ರ

2) ಚಾಲ್ತಿಯಲ್ಲಿರುವ ಲಘು ಮೋಟಾರ್ ವಾಹನ ಪರವಾನಿಗೆ ಪತ್ರ

3) ಜನ್ಮ ದಿನಾಂಕವನ್ನು ದೃಢೀಕರಿಸುವ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರ ಅಥವಾ ವರ್ಗಾವಣೆ ಪ್ರಮಾಣ ಪತ್ರ (T.C) ಕ್ಯುಮುಲೇಟಿವ್ ರೆಕಾರ್ಡ್.

4) ಜಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

5) ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರ (First Aid Certificate)

6) ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

7) ಸ್ಥಳೀಯ ಇಬ್ಬರು ಗಣ್ಯರಿಂದ ಪಡೆದ ನಡತೆ ಪ್ರಮಾಣ ಪತ್ರಗಳು,

8) ದೇಹದಾರ್ಢ್ಯತೆ (Physical Standerd / Fitness) ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ

(ಇದನ್ನು ಅಸಿಸ್ಟೆಂಟ್ ಸರ್ಜನ್ (ಗ್ರೇಡ್ ನಂ-1) ಇದಕ್ಕಿಂತ ಕಡಿಮೆ ದರ್ಜೆಯ ಅಧಿಕಾರಿಗಳು ನೀಡಿರಬಾರದು. ದೃಢೀಕೃತ ಪ್ರತಿ ಲಗತ್ತಿಸತಕ್ಕದ್ದು)

9) ವಿಧವೆಯಾಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ

**ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವಂತೆ ಅರ್ಹತೆ ಹಾಗೂ ಮೀಸಲಾತಿಗೆ ಅನುಗುಣವಾಗಿ ಮೇಲ್ಕಾಣಿಸಿದ ಮೂಲ ದಾಖಲಾತಿಗಳ ಪ್ರಮಾಣ ಪತ್ರಗಳನ್ನು ಹೊಂದಿರಬೇಕು ಹಾಗೂ ಇಲಾಖೆಯು ಮೂಲ ದಾಖಲಾತಿಗಳನ್ನು ಪರಿಶೀಲನೆಗಾಗಿ ಸೂಚಿಸಿದಾಗ ಮಾತ್ರ ಹಾಜರುಪಡಿಸತಕ್ಕದ್ದು.**

**11) ಅರ್ಹತಾ ಷರತ್ತುಗಳು :**

(ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

(ಆ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಅತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತನಾಗಿರಬೇಕು.

(ಇ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾಯ್ದಿರಿಸಿಕೊಂಡಿದೆ.

(ಈ) ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

**12) ವಿಶೇಷ ಸೂಚನೆಗಳು :**

1) ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಲಭ್ಯವಿರುವ ಸೂಚನೆಗಳನ್ನು ತಪ್ಪದೇ ಗಮನಿಸತಕ್ಕದ್ದು.

2) ಒಬ್ಬ ಅಭ್ಯರ್ಥಿಯು ಒಂದು ಹುದ್ದೆಗೆ ಒಂದು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅರ್ಜಿಗಳು ಸಲ್ಲಿಸಿದ್ದಲ್ಲಿ ಮೊದಲು ಸಲ್ಲಿಸಿರುವ ಅರ್ಜಿಯನ್ನು ಮಾತ್ರ ಪರಿಗಣಿಸಿ ಒಂದು ಬಾರಿ ಮಾತ್ರ ಚಾಲನಾ ವೃತ್ತಿ ಪರೀಕ್ಷೆಯನ್ನು ನೀಡಲಾಗುವುದು.

3) ಇಲಾಖೆಯ ನೇಮಕಾತಿ ನಿಯಮಾವಳಿಯನುಸಾರ ಅಂಗವಿಕಲರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

4) ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ.

5) ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ಭರ್ತಿ ಮಾಡದೇ ಅರ್ಜಿ ಸಲ್ಲಿಸಿದ್ದಲ್ಲಿ, ಸದರಿ ಅರ್ಜಿಯು ತಿರಸ್ಕೃತವಾದಲ್ಲಿ ಅಥವಾ ಯಾವುದೇ ಸೌಲಭ್ಯದಿಂದ ವಂಚಿತರಾದಲ್ಲಿ ಅದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರು.

6) ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರನ್ನು ನೋಂದಾಯಿಸಿದ ಅರ್ಹ ಅಭ್ಯರ್ಥಿಗಳು ಸಹ ಈ ಅಧಿಸೂಚನೆ ಪ್ರಕಾರ ಅರ್ಜಿ ಸಲ್ಲಿಸಬಹುದಾಗಿದೆ.

7) ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿ ಉದ್ಯೋಗ ಪಡೆಯುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ ಹಾಗೂ ತೆಗೆದುಹಾಕಲಾಗುತ್ತದೆ. ಸುಳ್ಳು ಮಾಹಿತಿ ಅಥವಾ ನಕಲಿ ಪ್ರಮಾಣ ಪತ್ರ / ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು ಯಾವುದೇ ಸಂದರ್ಭದಲ್ಲಿ ಕಂಡುಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೇ ನೌಕರಿಯಿಂದ ವಜಾ ಮಾಡುವುದರ ಜೊತೆಗೆ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮತೆಗೆದುಕೊಳ್ಳಲಾಗುವುದು.

8) ಅಭ್ಯರ್ಥಿಗಳು ಮೀಸಲಾತಿಯನ್ನು ಕೋರುತ್ತಿದ್ದಲ್ಲಿ ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ಅರ್ಹತೆಯನ್ನು (ಕ್ರೈಟೆರಿಯ) ಸರಿಯಾಗಿ ತಿಳಿದುಕೊಂಡು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

9) ನೈತಿಕ ದುರ್ನಡತೆಯಿಂದಾಗಿ / ನೀತಿ ಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ಈ ಇಲಾಖೆಯಲ್ಲಿ ಅಥವಾ ರಾಜ್ಯ / ಕೇಂದ್ರ / ಸ್ಥಳೀಯ ಸಂಸ್ಥೆ / ಕೈಗಾರಿಕಾ / ವಾಣಿಜ್ಯಕ್ಕೆ ಸಂಬಂಧಪಟ್ಟ ಅಥವಾ ಇತರೆ ಕಛೇರಿಗಳಿಗೆ ನೈತಿಕ ದುರ್ನಡತೆಯಿಂದಾಗಿ / ನೀತಿ ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ / ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ / ವಜಾ ಮಾಡಲ್ಪಟ್ಟಿದ್ದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅನರ್ಹರಾಗಿರುತ್ತಾರೆ / ಅರ್ಜಿ ಸಲ್ಲಿಸಿದ್ದಲ್ಲಿ ತಿರಸ್ಕರಿಸಲಾಗುವುದು.

10) ಯಾವುದೇ ರೀತಿಯ ಒತ್ತಡಗಳನ್ನು, ಶಿಫಾರಸ್ಸುಗಳನ್ನು ಮಾಡಿದರೆ ಅಂತವರ ಅರ್ಜಿಗಳನ್ನು ತಿರಸ್ಕರಿಸಲಾಗುದು.

11) ನೇಮಕಾತಿಯ ವಿವಿಧ ಹಂತಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ವೆಬ್‌ಸೈಟ್ uttarakannada.nic.in ನಲ್ಲಿ ಪಡೆಯಬಹುದಾಗಿರುತ್ತದೆ. ಆದ್ದರಿಂದ ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳು ಯಾವುದೇ ರೀತಿಯ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಆಸ್ಪದವಿರುವುದಿಲ್ಲ.

12) ಅಭ್ಯರ್ಥಿಗಳ ಅರ್ಹತೆ ಮತ್ತು ಆಯ್ಕೆಯ ವಿಷಯದಲ್ಲಿ ಇಲಾಖೆಯ ನಿರ್ಧಾರವೇ ಅಂತಿಮವಾಗಿರುತ್ತದೆ.

13) ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವಾ ಕರ್ನಾಟಕ ಸರ್ಕಾರ / ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರಸ್ಥರಿಂದ ನಿರಾಕ್ಷೇಪಣಾ ಪತ್ರವನ್ನು ಹಾಜರುಪಡಿಸತಕ್ಕದ್ದು.

14) ಈ ಅಧಿಸೂಚನೆಯನ್ವಯ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ಅಂತಹವರು ಉತ್ತರ ಕನ್ನಡ ಜಿಲ್ಲೆಯ ಯಾವುದೇ ತಾಲೂಕಿನಲ್ಲಿ ಸೇವೆ ಸಲ್ಲಿಸಲು ಬದ್ಧರಾಗಿರಬೇಕು.

15) ಮೇಲ್ಕಾಣಿಸಿದ ಹುದ್ದೆಗಳಿಗೆ ಮೊದಲು 1:3 ರ ಪ್ರಮಾಣದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ಈ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಮಾತ್ರ ಪೋಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆಗೆ ನಿಯೋಜಿಸಲಾಗುವುದು, ಅಭ್ಯರ್ಥಿಯ ವಾಹನ ಚಾಲನೆಯನ್ನು ಪರೀಕ್ಷಿಸಿದ ನಂತರ ಅಭ್ಯರ್ಥಿಗಳು ಸದರಿಯವರಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸತಕ್ಕದ್ದು. ಸದರಿ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿದ ನಂತರವಷ್ಟೇ ಅಭ್ಯರ್ಥಿಗೆ ನೇಮಕಾತಿ ಆದೇಶ ನೀಡಲಾಗುವುದು. ಒಂದು ವೇಳೆ ಅಭ್ಯರ್ಥಿಯು ಪ್ರಮಾಣ ಪತ್ರವನ್ನು ಪಡೆಯುವಲ್ಲಿ ವಿಫಲವಾದಲ್ಲಿ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ನಿಯೋಜಿಸಲಾಗುವುದು.

16) ಪ್ರಕಟಿಸಿರುವ ಹುದ್ದೆಗಳನ್ನು ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕು ಆಯ್ಕೆ ಪ್ರಾಧಿಕಾರಿಗಳಿಗೆ ದತ್ತವಾಗಿರುತ್ತದೆ.

17) ಆಯ್ಕೆ ಪ್ರಾಧಿಕಾರವು ವಾಹನ ಚಾಲಕರ ಹುದ್ದೆಗಳ ಭರ್ತಿ ಮಾಡುವ ವಿಚಾರ ಕುರಿತು ಪೂರ್ಣ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

18) ಮೇಲಿನ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ಆಯ್ಕೆ ಪ್ರಾಧಿಕಾರಿಯಾದ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಕಾರವಾರ ಇವರು ಕಾಯ್ದಿರಿಸಿಕೊಂಡಿದ್ದಾರೆ.

19) ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಜಿಲ್ಲಾಧಿಕಾರಿಗಳು (ಅಧ್ಯಕ್ಷರು ಮತ್ತು ಜಾತಿ ಆದಾಯ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

20) ಆಯ್ಕೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ನಿಯಮಗಳಿಗೆ ಒಳಪಟ್ಟಿರುತ್ತದೆ.

21) ಅರ್ಜಿ ಸಲ್ಲಿಸುವ ಲಕೋಟೆಯ ಮೇಲೆ **ಅಬಕಾರಿ ಇಲಾಖೆಯ ವಾಹನ ಚಾಲಕರ ಹುದ್ದೆಯ ನೇಮಕಾತಿಗೆ ಅರ್ಜಿ** ಎಂದು ಸ್ಪಷ್ಟವಾಗಿ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು.

22) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

23)ಅರ್ಜಿಯನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ, ಆ ದಿನಾಂಕದ ಮಾರನೆಯ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು. ಕೊನೆಯ ದಿನಾಂಕದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,**
**ವಾಹನ ಚಾಲಕರ ನೇಮಕಾತಿ ಸಮಿತಿ,**
**ಉತ್ತರ ಕನ್ನಡ ಜಿಲ್ಲೆ, ಕಾರವಾರ.**

**ಪ್ರತಿ:**

1) ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಮಂಗಳೂರು ವಿಭಾಗ, ಮಂಗಳೂರು ರವರಿಗೆ
3) ಜಿಲ್ಲೆಯ ಎಲ್ಲಾ ವಲಯಗಳ ಅಬಕಾರಿ ನಿರೀಕ್ಷಕರುಗಳಿಗೆ ಮತ್ತು ಉಪ ವಿಭಾಗಗಳ ಉಪ ಅಧೀಕ್ಷಕರುಗಳಿಗೆ ಸೂಚನಾ ಫಲಕಕ್ಕೆ ಪ್ರಕಟಿಸಲು ಹಾಗೂ ವ್ಯಾಪಕ ಪ್ರಚಾರಕ್ಕಾಗಿ
4) ಜಿಲ್ಲಾ ಉದ್ಯೋಗಾಧಿಕಾರಿಗಳು, ಉದ್ಯೋಗ ವಿನಿಮಯ ಕೇಂದ್ರ, ಉ.ಕ. ಜಿಲ್ಲೆ, ಕಾರವಾರ ರವರ ಮಾಹಿತಿಗಾಗಿ ಹಾಗೂ ಅಧಿಸೂಚನೆಯ ಪ್ರತಿಯನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಲು ಮತ್ತು ತಮ್ಮಿಂದ ನೋಂದಾಯಿಸಲ್ಪಟ್ಟಿರುವ ಅರ್ಹ ಅಭ್ಯರ್ಥಿಗಳಿಗೆ ಅಧಿಸೂಚನೆಯಂತೆ ಕೊನೆಯ ದಿನಾಂಕದೊಳಗೆ ತಮ್ಮಿಂದ ನೇರವಾಗಿ ತಿಳುವಳಿಕೆ ನೀಡಲು ಕೋರಲಾಗಿದೆ.
5) ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು, ಕಾರವಾರ ಇವರಿಗೆ ಕಳುಹಿಸುತ್ತಾ, ಮೇಲ್ಕಂಡ ಅಧಿಸೂಚನೆಯನ್ನು ನಿಗದಿತ ದಿನಾಂಕದೊಳಗಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಕನ್ನಡ ದಿನಪತ್ರಿಕೆಗಳಲ್ಲಿ ಸುದ್ದಿ ರೂಪದಲ್ಲಿ ಸರ್ಕಾರಕ್ಕೆ ಯಾವುದೇ ವೆಚ್ಚ ಬಾರದ ರೀತಿಯಲ್ಲಿ ಪ್ರಕಟಿಸಲು ಹಾಗೂ uttarakannada.nic.in ಈ ವೆಬ್-ಸೈಟ್‌ನಿಂದ ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ನಮೂನೆಯನ್ನು ಪಡೆಯಬಹುದಾಗಿರುತ್ತದೆಂದು ಸೂಚಿಸಲು ಕೋರಿದೆ.
6) ಡಿಸ್ಟ್ರಿಕ್ಟ್ ಇಂಫೋರ್ಮೆಟಿಕ್ಸ್ ಆಫೀಸರ್, ಎನ್.ಐ.ಸಿ., ಕಾರವಾರ ರವರಿಗೆ ಮಾಹಿತಿಗಾಗಿ ಹಾಗೂ uttarakannada.nic.in ಈ ವೆಬ್‌ಸೈಟ್‌ನಲ್ಲಿ ಅಧಿಸೂಚನೆ ಹಾಗೂ ಅರ್ಜಿ ನಮೂನೆಯನ್ನು ಪ್ರಕಟಿಸಲು ಕೋರಿದೆ.
7) ಕಛೇರಿಯ ಸೂಚನಾ ಫಲಕಕ್ಕೆ
8) ಕಡತಕ್ಕೆ.

# ಉತ್ತರ ಕನ್ನಡ ಜಿಲ್ಲಾ ಅಬಕಾರಿ ಇಲಾಖೆಯ ವಾಹನ ಚಾಲಕ ಹುದ್ದೆಯ ನೇಮಕಾತಿಗಾಗಿ ಅರ್ಜಿ

**ಇವರಿಗೆ,**

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ವಾಹನ ಚಾಲಕರ ನೇಮಕಾತಿ ಸಮಿತಿ,
ಉತ್ತರ ಕನ್ನಡ ಜಿಲ್ಲೆ, ಕಾರವಾರ.

ಇತ್ತೀಚಿನ ಭಾವಚಿತ್ರ

**ಮಾನ್ಯರೇ,**

**ವಿಷಯ:** ವಾಹನ ಚಾಲಕ ಹುದ್ದೆಗೆ ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಕುರಿತು.

**ಉಲ್ಲೇಖ:** ತಮ್ಮ ಕಾರ್ಯಾಲಯದ ಅಧಿಸೂಚನೆ ಸಂಖ್ಯೆ. ಇಎಕ್ಸ್ಇ/ಇಎಸ್ಟಿ/ಎಪಿಟಿ/ವಾಚಾ/120/2014-15, ದಿನಾಂಕ: 31/03/2015

----00000-----

| | | | | |
|---|---|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು | | | |
| 2 | ಅಭ್ಯರ್ಥಿಯ ತಂದೆ /ತಾಯಿ / ಪೋಷಕ/ ಪತಿಯ ಹೆಸರು | | | |
| 3 | ಖಾಯಂ ಅಂಚೆ ವಿಳಾಸ<br>ಪೋಸ್ಟ್<br>ತಾಲೂಕು<br>ಜಿಲ್ಲೆ<br>ಪಿನ್‌ಕೋಡ್ | | | |
| 4 | ದೂರವಾಣಿ /ಮೊಬೈಲ್ ಸಂಖ್ಯೆ | | | |
| 5 | ಜನ್ಮ ದಿನಾಂಕ ಹಾಗೂ ವಯಸ್ಸು (ಪ್ರಮಾಣ ಪತ್ರದ ದಾಖಲೆ ಲಗತ್ತಿಸುವದು)<br>ಹುಟ್ಟಿದ ಸ್ಥಳ/ಗ್ರಾಮ/ಪಟ್ಟಣ/ತಾಲ್ಲೂಕು/ಜಿಲ್ಲೆ | | | |
| 6 | ಲಿಂಗ | ಪುರುಷ / ಸ್ತ್ರೀ | | |
| 7 | ವಿದ್ಯಾರ್ಹತೆ<br>(7 ನೇ ತರಗತಿ ಅಂಕಪಟ್ಟಿಯ ದೃಢೀಕೃತ ಪ್ರಮಾಣ ಪತ್ರ ಲಗತ್ತಿಸುವುದು) | ನಿಗದಿತ ಗರಿಷ್ಠ ಒಟ್ಟು ಅಂಕಗಳು | ಗಳಿಸಿದ ಒಟ್ಟೂ ಅಂಕಗಳು | ಪ್ರತಿಶತ (%) |
| 8 | ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವ ಬಗ್ಗೆ ಮಾಹಿತಿ | | | |
| 9 | ವಾಹನ ಚಾಲನೆ ಪರವಾನಿಗೆಯ ವಿವರ (ಚಾಲ್ತಿಯಲ್ಲಿರುವ ಚಾಲನೆ ಪರವಾನಿಗೆ ದೃಡಿಕೃತ ಪ್ರತಿಯನ್ನು ಲಗತ್ತಿಸುವುದು) | | | |
| 10 | ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರ – (First Aid Certificate) (ದೃಢೀಕೃತ ಪ್ರತಿಯನ್ನು ಲಗತ್ತಿಸುವದು) | | | |

| | | |
|---|---|---|
| 11 | ದೇಹದಾರ್ಢ್ಯತೆ ಬಗ್ಗೆ ಮೂಲ ವೈದ್ಯಕೀಯ ಪ್ರಮಾಣ ಪತ್ರ. | |
| 12 | ಕೋರಿರುವ ಮೀಸಲಾತಿ ಜಾತಿ/ವರ್ಗ ಅಂದರೆ ಪ.ಜಾ/ಪ.ಪಂ/ಪ್ರವರ್ಗ-1/ಇತರೆ/ ಸಾ.ವರ್ಗ (ಪ್ರಮಾಣ ಪತ್ರ ಲಗತ್ತಿಸುವುದು) | |
| 13 | ಗ್ರಾಮೀಣ ಅಭ್ಯರ್ಥಿಯೇ ? (ಪ್ರಮಾಣ ಪತ್ರ ಲಗತ್ತಿಸುವುದು) | |
| 14 | ಸ್ಥಳೀಯ ಇಬ್ಬರು ಗಣ್ಯರಿಂದ ಪಡೆದ ಮೂಲ ನಡತೆ ಪ್ರಮಾಣ ಪತ್ರಗಳು | |
| 15 | ಎಲ್ಲಾ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿರುವಿರಾ ? | ಹೌದು / ಇಲ್ಲಾ |
| 16 | ಅರ್ಜಿ ಶುಲ್ಕ ರೂ. ೫/- ರ ಪೋಸ್ಟಲ್ ಆರ್ಡರ್ ಸಂಖ್ಯೆ ಮತ್ತು ದಿನಾಂಕ | |
| 17 | ಅಂಚೆ ಕಛೇರಿ ಹೆಸರು ಮತ್ತು ವಿಳಾಸ | |

## ಘೋಷಣಾ ಪತ್ರ

ಶ್ರೀ / ಶ್ರೀಮತಿ / ಕುಮಾರಿ. ______________________________ ಆದ ನಾನು ಅರ್ಜಿ ಸಲ್ಲಿಸಿರುವ ಹುದ್ದೆಗೆ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಎಲ್ಲಾ ಅರ್ಹತೆಯನ್ನು ಹೊಂದಿರುತ್ತೇನೆ. ಅರ್ಜಿಯನ್ನು ಸರಿಯಾಗಿ ಭರ್ತಿ ಮಾಡದಿದ್ದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸಬಹುದು. ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ಸತ್ಯವಾಗಿದ್ದು, ಪರಿಪೂರ್ಣವಾಗಿವೆ. ವಿವರಗಳು ಸುಳ್ಳಾಗಿ ಕಂಡು ಬಂದ ಪಕ್ಷದಲ್ಲಿ ನನ್ನನ್ನು ಯಾವಾಗಲಾದರೂ ಸೇವೆಯಿಂದ ಯಾವ ಮುನ್ಸೂಚನೆಯಿಲ್ಲದೆ ವಜಾ ಮಾಡುವುದರೊಂದಿಗೆ ಕ್ರಿಮಿನಲ್ ಮೊಕದ್ದಮೆಗೆ ಕ್ರಮಕೈಗೊಳ್ಳಲು ಇಲಾಖೆಗೆ ಅಧಿಕಾರವಿದೆಯೆಂದು ತಿಳಿದಿದ್ದೇನೆ ಹಾಗೂ ನಾನು ಈವರೆಗೆ ಯಾವುದೇ ಕಾನೂನು ಬಾಹಿರ ಬಹುಪತಿ / ಪತ್ನಿತ್ವ ಹೊಂದಿರುವುದಿಲ್ಲ ಸರ್ಕಾರಿ / ಸರ್ಕಾರಿ ಸ್ವಾಮ್ಯದ ಇಲಾಖೆಗಳ ಸೇವೆಯಿಂದ ವಜಾಗೊಂಡಿರುವುದಿಲ್ಲ ಹಾಗೂ ಕ್ರಿಮಿನಲ್ ಮೊಕದ್ದಮೆಗಳನ್ವಯ ವಿಚಾರಣೆ / ಶಿಕ್ಷೆಗೆ ಒಳಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ.

**ದಿನಾಂಕ** :
**ಸ್ಥಳ** :

**(ಅಭ್ಯರ್ಥಿಯ ಸಹಿ)**